ಓ .ಎಸ್ . ನಂ. 69 /2010 ಪಿಡಬ್ಲ್ಯೂ: 1

ದಿನಾಂಕ 03.09.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ– ಶ್ರೀ ಎಂ ಡಿ (1 ಮತ್ತು 2 ನೇ ಪ್ರತಿವಾದಿ ಪರ) ವಕೀಲರಿಂದಃ

ದೊಡ್ಡರವಳಯ್ಯರವರಿಗೆ 1 ಮತ್ತು 2 ನೇ ಪ್ರತಿವಾದಿಗಳು ಸಂಬಂಧದಲ್ಲಿ ಏನಾಗಬೇಕೆಂದು ನನಗೆ ಗೊತ್ತಿರುವುದಿಲ್ಲ. ನಾನು ಈ ದಾವೆಯನ್ನು ಪೂಜಾ ಹಕ್ಕು ನಮಗೆ ಸೇರಬೇಕಾದುದ್ದು ಎಂದು ಪರಿಹಾರವನ್ನು ಕೇಳಿ ಹಾಕಿರುತ್ತೇನೆ. ನಾನು ಮದುವೆಯಾದ ಮೇಲೆ 2 ನೇ ಪ್ರತಿವಾದಿ ದೊಡ್ಡರವಳಯ್ಯನವರ ಮೊದಲನೆ ಹೆಂಡತಿ ಹಾಗೂ 1 ನೇ ಪ್ರತಿವಾದಿ ಅವರ ಮಗ ಎಂದು ಗೊತ್ತಾಗಿರುತ್ತದೆ. ನಾನು ದೊಡ್ಡರವಳಯ್ಯನವರ ಜೊತೆ ಮದುವೆಯಾಗುವಾಗ ದೇವಸ್ಥಾನದಲ್ಲಿ ಹಾರ ಬದಲಾಯಿಸಿಕೊಂಡು ನನ್ನ ಗಂಡ ನನಗೆ ತಾಳಿ ಕಟ್ಟುವ ಮೂಲಕ ಮದುವೆಯಾಗಿರುತ್ತಾರೆ. ನಾನು ಮತ್ತು ದೊಡ್ಡರವಳಯ್ಯ ಇಬ್ಬರು ಸಹ ಬೇರೆ ಬೇರೆ ಜಾತಿಗೆ ಸೇರಿದವರಾಗಿರುತ್ತೇವೆ. ನಾವು ದೇವಸ್ಥಾನದಲ್ಲಿ ಮದುವೆಯಾದ ಬಗ್ಗೆ, ಅಲ್ಲಿ ಅರ್ಚಕರು ನಮ್ಮ ಮದುವೆ ನೆರವೇರಿಸಿದ ಬಗ್ಗೆ ಹಾಗೂ ನನ್ನ ಗಂಡ ನನಗೆ ತಾಳಿ ಕಟ್ಟಿದ ಬಗ್ಗೆ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ನಾನು ನ್ಯಾಯಾಲಯಕ್ಕೆ ಯಾವ ಯಾವ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದು ನನಗೆ ತಿಳಿದಿರುತ್ತದೆ. ದೊಡ್ಡರವಳಯ್ಯರವರಿಗೆ ಯಾವುದೇ ರೋಗಗಳು ಇಲ್ಲದೆ ದಷ್ಟಪುಷ್ಟರಾಗಿದ್ದರು. ನಿಪಿ–1 ವಿಲ್ ಪತ್ರವನ್ನು ಬರೆಯವಾಗ ದೊಡ್ಡರವಳಯ್ಯ ಆರೋಗ್ಯವಾಗಿದ್ದರು. ನಿಪಿ–1 ರಲ್ಲಿ ಏನು ಬರೆದಿದೆ ಎನ್ನುವುದನ್ನು ನಾನು ತಿಳಿದುಕೊಂಡಿರುತ್ತೇನೆ. ದೊಡ್ಡರವಳಯ್ಯ ಬದುಕಿರುವಾಗ ನನಗೂ ಹಾಗೂ ಅವರಿಗೂ ಯಾವುದೇ ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಪೂಜಾ ಹಕ್ಕಿಗೆ ಸಂಬಂದಿಸಿದಂತೆ ಹಲವು ಪ್ರಕರಣಗಳಾಗಿದ್ದು 1 ನೇ ಪ್ರತಿವಾದಿಯೇ ಪೂಜಾ ಹಕ್ಕನ್ನು ಹೊಂದಿರುತ್ತಾನೆ ಎಂದು ಆದೇಶವಾಗಿದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಾನು ದಾವೆಯನ್ನು ಸಲ್ಲಿಸುವ ಮೊದಲಿನಿಂದಲೂ ಹಾಗೂ ಈಗಲೂ ನಾನೇ ಪೂಜಾ ವಿಧಿವಿಧಾನವನ್ನು ಮಾಡುತ್ತಿರುತ್ತೇನೆ. ನನಗೂ ಹಾಗೂ ಪ್ರತಿವಾದಿಗಳಿಗೂ ಪೂಜಾ ವಿಚಾರದ ಬಗ್ಗೆ ಜಗಳವಾದ ಕಾರಣ ಈ ದಾವೆಯನ್ನು ಪ್ರತಿವಾದಿಗಳ

ವಿರುದ್ಧ ಹೂಡಿರುತ್ತೇನೆ. ವಾದ ಪತ್ರದಲ್ಲಿರುವ ಸಂಗತಿಯ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಸಂತೋಷ ಕೊಠಾರಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ